ದಿನಾಂಕ 9.11.1998ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ದ.ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರ ಸಮಸ್ಯೆ.

549:(3875)

ಎಸ್.ಯೋಗೇಶ್‌ಭಟ್ (ಮಂಗಳೂರು): ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲೇ ಅತೀ ಹೆಚ್ಚಿನ ಬೀಡಿ ಕಾರ್ಮಿಕರನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರಿಗೆ ಆಸ್ಪತ್ರೆಯನ್ನು ಆರಂಭ ಮಾಡಲು ಸರ್ಕಾರಕ್ಕೆ ತೊಂದರೆಗಳೇನಾದರೂ ಇದೆಯೇ? ಹಾಗಿಲ್ಲದಿದ್ದರೆ ಅದನ್ನು ಯಾವಾಗ ಆರಂಭ ಮಾಡಲಾಗುವುದು?

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯ ಮಂತ್ರಿಗಳು)

ಅ) ಈ ವಿಷಯ ಭಾರತ ಸರ್ಕಾರದ ಶ್ರಮ ಮಂತ್ರಾಲಯ ವ್ಯಾಪ್ತಿಗೆ ಬರುತ್ತದೆ. ಭಾರತ ಸರ್ಕಾರದ ನೀತಿಯ ಪ್ರಕಾರ ಈಗಾಗಲೇ ರಾಜ್ಯದಲ್ಲಿ ಬೀಡಿ ಕಾರ್ಮಿಕರಿಗೆ ಒಂದು ಆಸ್ಪತ್ರೆಯನ್ನು ಮೈಸೂರಿನಲ್ಲಿ ಸ್ಥಾಪಿಸಲಾಗಿದೆ. ಆದ್ದರಿಂದ ಇನ್ನೊಂದು ಅಂತಹ ಆಸ್ಪತ್ರೆಯನ್ನು ರಾಜ್ಯದಲ್ಲಿ ಸ್ಥಾಪಿಸಲು ಸಾಧ್ಯವಾಗುವುದಿಲ್ಲ.

ಪತ್ರಿಕಾ ಅಕಾಡೆಮಿಯ ಹೊಸ ಯೋಜನೆಗಳು.

550:(3903)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ವಾರ್ತಾ ಮತ್ತು ಪ್ರಚಾರ ಹಾಗೂ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪತ್ರಿಕಾ ಅಕಾಡೆಮಿಯು ಹೊಸ ಯೋಜನೆಗಳನ್ನು ರೂಪಿಸಿದೆಯೇ?

ಆ) ಹಾಗಿದ್ದಲ್ಲಿ ಆ ಯೋಜನೆಗಳು ಯಾವುವು?

ಇ) ಈ ಯೋಜನೆಗಳ ಅನುಷ್ಠಾನಕ್ಕೆ ತಗಲುವ ವೆಚ್ಚವೆಷ್ಟು?

ಈ) ಈ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ನೀಡುತ್ತಿರುವ ಅನುದಾನವನ್ನು

ಹೆಚ್ಚಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಸಿ.ನಾಣಯ್ಯ (ಕಾನೂನು, ವಾರ್ತಾ ಪ್ರಚಾರ ಸಚಿವರು):

ಅ) ಹೌದು.

ಆ) ಕರ್ನಾಟಕ ಪತ್ರಿಕಾ ಅಕಾಡೆಮಿಯು ಈ ಕೆಳಕಂಡ ಹೊಸ ಯೋಜನೆಗಳನ್ನು ರೂಪಿಸಿದೆ:-

1) ದತ್ತಿ ಉಪನ್ಯಾಸ

2) ಗುಂಪು ಸಂವಾದ

3) ಅರ್ಹ ಪತ್ರಿಕೋದ್ಯಮಿಗಳಿಗೆ ವಿದೇಶದಲ್ಲಿ ತರಬೇತಿ

4) ಪತ್ರಿಕಾ ಮಾಧ್ಯಮದವರಿಗೆ ಕರ್ನಾಟಕ ದರ್ಶನ

5) ಪತ್ರಿಕೆಗಳಲ್ಲಿ ಕನ್ನಡ ಬಳಕೆ

6) ರಸಗ್ರಹಣ ಶಿಬಿರ

7) ಕಾನೂನು ಶಿಬಿರ

8) ಪೋಲಿಸರು-ಪತ್ರಕರ್ತರ ನಡುವೆ ವಿಚಾರ ವಿನಿಮಯ

ಇ) ಈ ಹೊಸ ಯೋಜನೆಗಳಿಗೆ ತಗಲುವ ಅಂದಾಜು ವೆಚ್ಚ ರೂ. 1.70 ಲಕ್ಷ.

ಈ) ಈ ಯೋಜನೆಗಳ ಅನುಷ್ಠಾನಕ್ಕೆ ಈಗಾಗಲೇ ಹೆಚ್ಚುವರಿ ಅನುದಾನ ಒದಗಿಸಲಾಗಿದೆ.

ಹವಾನಿಯಂತ್ರಿತ ವ್ಯವಸ್ಥೆ ಹೊಂದಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗಳು

551:(3981)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ